**ವ್ಯಾಖ್ಯಾನ**

# ಕರುಣಿಸೋ ರಂಗಾ ಕರಣಿಸೋ

ದಾಸವರೇಣ್ಯರು, ಜ್ಞಾನಿವರೇಣ್ಯರು, ನಾರದರ ಅವತಾವೆಂದೇ ಪ್ರಸಿದ್ಧರಾದವರು ಪುರಂದರದಾಸರು. ದೇವರನ್ನು ಕಂಡವರು. ಸಂಗೀತದಿಂದ ಸದಾ ಹರಿಯ ಆರಾಧಿಸುವವರು. ನಾರಾಯಾಣನ ನಾಮಸ್ಮರಣೆ ನಿರತರು. ಹರಿ ಕರುಣೆ ಪಡೆದವರು. ಪಾಮರರ ಉದ್ಧಾರ ಅವರ ಬಯಕೆ. ನಮ್ಮೆಲ್ಲ – ಪಾಮರರ ಪರವಾಗಿ ನಿಂತರು. ನಮ್ಮ ಉದ್ಧಾರಕ್ಕಾಗಿ ಶ್ರೀರಂಗನನ್ನು ಹಾಡಿ, ಕೊಂಡಾಡಿ ಪ್ರಾರ್ಥಿಸುತ್ತಿದ್ದಾರೆ.

ಇಂತು – ನಾನು ಪಾಮರ. ನಾನೇನು ಬಲ್ಲೆ ನಿನ್ನ ಮಹಿಮೆ. ಸಾಧಿಸಿ, ನಿನ್ನ ಒಲುಮೆ ಸಾಧಿಸುವದು ಅಸಾಧ್ಯ. ಕರುಣಿಸಿ ಉದ್ಧರಿಸು ಕರುಣಾಕರ. ಅದಕ್ಕಾಗಿ ಕರುಣಿಸೋ ರಂಗ, ಕರುಣಿಸೋ. ಅಂತರಾಳದ ಪ್ರಾರ್ಥನೆ ಸ್ವಾಮಿ ದಯೆ ತೋರು, ನಮ್ಮನ್ನು ಮೇಲಕೆತ್ತು.

ಈ ಕಲಿಯುಗದಲ್ಲಿ ನಾಮಸ್ಮರಣೆ ತಾರಕ. ಸದಾ ನಿನ್ನ ನಾಮ ನನ್ನ ನಾಲಿಗೆಯ ಮೇಲೆ ನಲಿದಾಡಲಿ ನಾರಾಯಣಾ. ನನ್ನ ದಿನ ನಿತ್ಯದ ಕಾರ್ಯಕ್ರಮ ನಡೆಯುತ್ತಿರಲಿ. ಅಲ್ಲೆಲ್ಲ, ಹಗಲು ಇರಳು ನಿನ್ನ ನಾಮ ನೆನೆಯುವ ಭಾಗ್ಯ ಕೊಡು. ಹಗಲು ಪ್ರಕಾಶಮಯ. ಜ್ಞಾನ ಸುಖದ ಸಂಕೇತ. ಇರಳು ಕತ್ತಲೆ. ಅಜ್ಞಾನ ದುಖಃದ ಪ್ರತೀಕ. ಜ್ಞಾನವಿರಲಿ, ಅಜ್ಞಾನವಾಗಲಿ, ಸುಖವಾಗಲಿ, ಬಹು ದುಃಖವಾಗಲಿ, ಸಖನಾಗಿ ನಿನ್ನ ಸ್ಮರಣೆ ಸದಾ ಕೊಡುಮ ಕರುಣಿಸೋ ರಂಗಾ.

ಮಕ್ಕಳಾಡಿಸುವಾಗ, ಅಕ್ಕರದಿ ನಲೆವಾಗ, ವಾಹನದಲಿ ಮೆರೆವಾಗ, ಉಣುವಾಗ, ಉಡುವಾಗ ಎಲ್ಲ ಸುಖದಿ ನಿನ್ನ ನಾಮ ಸ್ಮರಣೆ ಕೊಡು. ದುಡಿವಾಗ, ದುಖಃಪಡುವಾಗ, ರೋಗ ರುಜಿನ ಅನುಭವಿಸುವಾಗ, ದೇವಕಿತನಯನ ನೆನಪು ಸದಾ ಜೊತೆಯಾಗಿರಲಿ. ಅದು ತಾರಕ ಎಂಬ ಅರಿವಿರಲಿ ನನಗೆ.

ವ್ರತ ನಿಯಮ ನಾನರಿಯೆ ದೊರೆಯೆ. ರುಕ್ಮಾಂಗದ ಮಹರಾಜ. ಮಹಾ ಧಾರ್ಮಿಕ. ವಿಷ್ಣು ಭಕ್ತ. ವ್ರತ ನಿಯಮ ಪಾಲಕ. ಏಕಾದಶಿ ವ್ರತವಂತೂ ಆತನಿಗೆ ಪಂಚಪ್ರಾಣ. ತಾನು ಮಾಡುತ್ತಿದ್ದ. ತನ್ನವರಿಂದ ಮಾಡಿಸುತ್ತಿದ್ದ. ಅಷ್ಟೇ ಅಲ್ಲ, ರಾಜ್ಯದ ಪ್ರಜೆಗಳೆಲ್ಲ ಏಕಾದಶಿ ವ್ರತ ಆಚರಿಸಬೇಕು. ಅದು ಅವನ ರಾಜಾಜ್ಞೆ. ತಪ್ಪಿದರೆ ಶಿಕ್ಷೆ. ಏಕಾದಶಿ ವ್ರತಕ್ಕಾಗಿ ಯಾವ ತ್ಯಾಗಕ್ಕೂ ಸಿದ್ದ ರಾಜ ಎಂಬುದು ಪ್ರಸಿದ್ಧ ಕಥೆ.

ಅಂಥ ನಿಷ್ಠೆ ನನಗೆಲ್ಲಿ ಸ್ವಾಮಿ? ಸಾಮರ್ಥ್ಯವೂ ಇಲ್ಲ. ಏಕಾದಶಿ ಅಹೋರಾತ್ರಿ ಭಾಗವತ ಶ್ರವಣ, ನಿನ್ನ ನಾಮ ಸಂಕೀರ್ತನೆ ಭಾಗ್ಯ ಕರುಣಿಸು ರಂಗ.

ಶುಕಮುನಿ ರುದ್ರಾವತಾರ. ವ್ಯಾಸರ ಪ್ರೀತಿಯ ಪುತ್ರ. ತಂದೆಯಿಂದ ಭಾಗವತ ಕೇಳಿದ ಭಾಗ್ಯದ ಪರಮ ಭಾಗವತ. ಕೇಳಿದ ಭಾಗವತ ಜಗಕೆ ಹೇಳಿದ. ಹರಿ ನಿನ್ನ ಕೊಂಡಾಡಿ ಸ್ತುತಿಸಿದ. ಅಂತು ನಿನ್ನ ಸ್ತುತಿಸುವ ಯೋಗ್ಯತೆ ನನ್ನದಲ್ಲ. ಕರುಣದಿ ಹರಿ ನಿನ್ನ ಅನುಗ್ರಹವಾಗಲಿ. ನಿರಂತರ ಭಾಗವತ ಶ್ರವಣವಾಗಲಿ. ಭಾಗವತ ಪ್ರತಿಪಾದ್ಯನ ಸ್ಮರಣೆ ಸದಾ ದೊರೆಯಲಿ.

ಬಕನ ವೈರಿ – ಬಕಾಸುರನ ವೈರಿ ಭೀಮಸೇನ ವಾಯುಪುತ್ರ. ಕಂಡ ಕಂಡಲ್ಲಿ ವಿಶ್ವರೂಪ ಕಾಂಬುವವ. ಧ್ಯಾನಿಸುವವ. ಆರಾಧಿಸುವವ. ಸಮರ್ಪಿಸುವವ. ನಿನ್ನ ಧ್ಯಾನಿಸಲು ನಾನು ಶಕ್ತನಲ್ಲ. ವಾಯುದೇವರ, ಅವರ ಅಂತರ್ಗತ ರಂಗ ನಿನ್ನ ಅನುಗ್ರಹವಾಗಲಿ. ಸದಾ ನಿಮ್ಮ ಸ್ಮರಣೆ ದೊರೆಯಲಿ.

ಜಗದ ತಾಯಿ ಕೃಷ್ಣ. ಅವನಿಗೆ ಇಬ್ಬರು ತಾಯಂದಿರು ಈ ಜಗದಲ್ಲಿ. ದೇವಕಿ, ಮತ್ತೆ ಸಾಕಿದ ತಾಯಿ ಯಶೋಧೆ. ಇಬ್ಬರೂ ಕೃಷ್ಣನಿಗೆ ಮುದ್ದು ಮಾಡಿದರು. ಮುದ್ದೆಂಬ ಮದ್ದು ಮಾಡಿದರು. ಮುದ್ದು ಕೃಷ್ಣನ ಒಲಿಸಿಕೊಂಡರು. ಏನು ಧನ್ಯರೋ ಅವರು! ಆ ಮುದ್ದಿನ ಮದ್ದು ನಾನರಯೆ.

ಹೇ, ದೇವಕಿಕಂದ, ಯಶೋಧಾನಂದ, ಅನವರತ ನಿನ್ನ ಸ್ಮರಿಸುವ ಭಾಗ್ಯ ಕೊಡು. ಕರುಣಿಸು.
ಜಗವ ಪೊತ್ತವ ನೀನು. ನಿನ್ನ ಹೊತ್ತು ಸಂಚರಿಸುವವ ಗರುಡ. ಅದು ನಿನ್ನ ಅನುಗ್ರಹ ಮಾತ್ರದಿ.
ಅಲ್ಪ ನಾನು. ಅಂತು ಸಾಮರ್ಥ್ಯ ನನಗಿಲ್ಲ. ನನಗೆ ಕರುಣಿಸೋ ರಂಗ, ನಿನ್ನ ಪಲ್ಲಕ್ಕಿ, ರಥಾದಿ ವಾಹನೋತ್ಸವದಲ್ಲಿ ಭಾಗವಹಿಸುವ ಭಾಗ್ಯ.

ಮನದಿ ವಂದಿಸಿದ. ಭಕ್ತಿ ತುಂಬಿದ. ಕರಿರಾಜ ಕೂಗಿ ಕರೆದ. ಓಡಿ ಬಂದೆ. ಉದ್ಧರಿಸಿದೆ. ನಾನೇನೂ ಕರಿರಾಜನಲ್ಲ. ಅಂತು ಆಳ ನನ್ನಲ್ಲಿಲ್ಲ.
ಆದರೂ ಕರುಣಾಸಾಗರ ನೀನು. ಯಾವದೇ ನೆಪದಿಂದಾಗಲಿ, ನಿನ್ನ ಕೂಗುವ, ಕೂಗಿ ಕರೆಯುವ, ಅದರಿಂದಾಗುವ ನಿನ್ನ ನಾಮ ಸ್ಮರಣೆ ನನ್ನ ವದನದಿ ಕರುಣಿಸೋ ರಂಗ.

ನವವಿಧ ಭಕ್ತಿ ಮಾಡಲು ನಾನರಿಯೆ. ದಾಸ್ಯವ ನಾನರಿಯೆ. ನೀನು ಈಶ. ಕಪಿವರ ಹನುಮ ನಿನ್ನ ಪ್ರಥಮ ದಾಸ. ಅವನ ನಿಷ್ಠೆಗೆ ಅವನೇ ಸಾಟಿ. ರಾವಣನ ತುಂಬಿದ ಸಭೆ. 'ಎಲೆ ಕಪಿಯೇ ಯಾರು ನೀನು?' ಲಂಕಾಧಿಪನ ನೇರ ಪ್ರಶ್ನೆ. 'ದಾಸೋಹಂ ಕೋಸಲೇಂದ್ರಸ್ಯ' ರಾಮನ ನೆನೆದು ಮಾರುತ್ತರ ಹನುಮನಿಂದ. ರಾಮನ ಅಪಾರ ದಾಸರ ಸಾಲಿನ ಕೊನೆಯ ದಾಸ ನಾನು. ತುಂಬಿದ ನಿಷ್ಠೆ, ಇಲ್ಲದ ಅಹಂನಿಂದ ಧೀಮಂತ ಹನುಮಂತನ ಉತ್ತರ. ಕಾಯಾ ವಾಚಾ ಮನಸಾ ಸೇವೆ ಮಾಡಿದ ವರದಾಸ, ವಿರಕ್ತ ಶಿಖಾಮಣಿ ಜೀವೋತ್ತಮ, ವಾಯುಪುತ್ರ ಹನುಮಂತ. ಅಂಥ ಹನುಮನ ಅನುಗ್ರಹ

ನಮಗಾಗಲಿ. ರಾಮನಾಮ ಜಪ ನಮಗೆ ದೊರೆಯಲಿ. ರಾಮನಾಮಾಮೃತ ನನ್ನ ನಾಲಿಗಿಗೆ ದೊರೆವಂತೆ ಕರುಣಿಸೋ ರಂಗಾ.

ಏನು ಧನ್ಯಳೋ ಶ್ರೀರಮಣಿ. ನಿನ್ನ ವಕ್ಷಸ್ಥಳ ನಿವಾಸಿನಿ. ನಿತ್ಯಾವಿಯೋಗಿನಿ.
ಅವಿರತ ಸೇವೆ ಮಾಡುವಳೋ. ವೈಕುಂಠ, ಅಲ್ಲಿಯ ಅರಮನೆ, ಸಿರಿಮನೆ, ಎಲ್ಲವೂ ಲಕ್ಷ್ಮಿಯೇ. ಶಯನ, ಪರ್ಯಂಕ, ಛತ್ರ ಚಾಮರ, ವ್ಯಜನ ಎಲ್ಲವೂ ಅವಳೇ. ಎಲ್ಲ ಸೇವೆಯೂ ಅವಳದ್ದೇ. ಕೋಟಿ ಕೋಟಿ ಭೃತ್ಯರು ನಿನಗೆ. ಅವರೆಲ್ಲ ಹೆಸರಿಗೆ. ಸಾಟಿ ಇಲ್ಲದ ಸೇವೆ ಸದಾ ಮಾಡುವವಳು ಮಹಾಲಕ್ಷ್ಮಿಯೇ. ಶ್ರೀರಮಣಿ ಕರಕಮಲ ಪೂಜಿತ ನೀನು. ಅಂತು ಸರ್ವಸೇವೆ ಸಲ್ಲಿಸುತ್ತ ನಿನ್ನ ಮರಳು ಮಾಡಿದ್ದಾಳೆ ಮಾಯಾದೇವಿ. ಅದು ಲಕ್ಷ್ಮೀದೇವಿಯರ ಅದ್ವಿತೀಯ ಸೇವೆ. ಕಡುಕರುಣಿ ನೀನು. ನನ್ನದು ಪಾಮರನ ಸೇವೆ. ಪತ್ರಂ, ಪುಷ್ಪಂ, ಫಲಂ, ತೋಯಂ ಸ್ವೀಕರಿಸಿ ಕರುಣಿಸೋ ರಂಗಾ.

ಅಧೀನ ಭೂಮಂಡಲ, ಅಂತರಿಕ್ಷ ದಾನ ಮಾಡಿದ ಬಲಿರಾಜ. ವಾಮನನ ಮೂರನೇ ಹೆಜ್ಜೆ ಎಲ್ಲಿ? ತನ್ನ ಶಿರ ಬಾಗಿದ. ತನ್ನನ್ನೇ ಸಮರ್ಪಿಸಿಕೊಂಡ. ಇಂಥ ದಾನ ಇನ್ನಿತರರಿಗೆ ಶಕ್ಯವೇ?
ಹರಿಯೇ, ನನ್ನ ಯೋಗ್ಯತೆ ಅಲ್ಲ. ನಂದೇನಿದೆಯೋ ಸ್ವಾಮಿ, ಎಲ್ಲವೂ ನಿಂದೇ. ಮನೆ, ಮಠ, ಮಡದಿ, ಮಕ್ಕಳು, ಧನ, ಕನಕ ನಿನ್ನದೇ. ನೀನು ಕೊಟ್ಟದ್ದೇ. 'ಕೆರೆಯ ನೀರನು ಕೆರೆಗೆ ಚಲ್ಲಿ ---'
ನನ್ನನ್ನೇ ಸಮರ್ಪಿಸಿಕೊಳ್ಳುತ್ತೇನೆ, ವರವ ಕೊಡು. ಕರುಣಿಸೋ ರಂಗ.

ಪಾರ್ಥ ನಿನ್ನ ಸಖನಾದರೆ, ಪಾರ್ಥನ ಸಾರಥಿಯಾದೆ. 'ಹೂವು ತರುವವರ ಮನೆಗೆ ಹುಲ್ಲು ತರುವ' ಕುರುಕ್ಷೇತ್ರದಲ್ಲಿ ಮುನ್ನಡೆಸಿದೆ. ಅಷ್ಟೇ ಅಲ್ಲ. ಜೀವನ ಎಂಬ ಕುರುಕ್ಷೇತ್ರವನ್ನೇ ಗೆದ್ದು ಕೊಟ್ಟೆ ಪಾಂಡವರಿಗೆ. ಪಾಂಡವರ ಪೊರೆದೆ. ಈ ಪರಿಯ ಸಖತ್ವ ನಾನರಿಯೆ. ಬೇರೆಲ್ಲೂ ಕಾಣೆ. ಆದರೂ, ಸುಖವಾಗಲಿ ಬಹು ದುಃಖವಾಗಲಿ ಸಖ ನೀನಾಗಿರು ಸ್ವಾಮಿ. ನಿನ್ನ ಸಖತ್ವ ಕರುಣಿಸೋ ರಂಗ. ಏನದು ಸಖ್ಯ? – ಶಾಸ್ತ್ರ ಪ್ರತಿಪಾದ್ಯ ನೀನು. ಶಾಸ್ತ್ರದ ಸಖ್ಯ ಮಾಡಬೇಕು. ಅಂದರೆ ಅಧ್ಯಯನ ಅಧ್ಯಾಪನ ರತನಾಗಬೇಕು. ಅದು ನಿನ್ನ ಸಖ್ಯ. **'ಮಿತಾತ್ ತ್ರಾಯತೇ ಮಿತ್ರಃ' ಆಪತ್ತಿಗಾದವನೇ ಸಖ.**

ಸಂಸಾರವೇ ದೊಡ್ಡ ಆಪತ್ತು. ತಾರಕ ನೀನೇ. ಕರುಣಿಸು. ಕೈ ಹಿಡಿದು ಉದ್ಧರಿಸು ರಂಗ.
ಹೀಗೆ ಪಾಮರರಾದ ನಮ್ಮನ್ನು ರಕ್ಷಿಸಿ ಉದ್ಧರಿಸಲು ನಮ್ಮ ಪರವಾಗಿ ತಮ್ಮ ಆರಾಧ್ಯ ದೈವ ವಿಠ್ಠಲನನ್ನು ದಾಸವರೇಣ್ಯ ಪುರಂದರದಾಸರು ಪ್ರಾರ್ಥಿಸುತ್ತಾರೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ